**ಓ.ಎಸ್.:405/17**

**ಪಿ. ಡಬ್ಲ್ಯೂ:1**

ದಿನಾಂಕಃ 15-03-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ . ಡಿ.ಎಸ್.ಬಿ. ವಕೀಲರಿಂದ**

ನನ್ನ ಅತ್ತೆಯ ಆಸ್ತಿಯಲ್ಲಿ ಪಾಲು ಬೇಕು ಅಂತ ಈ ದಾವೆ ಹಾಕಿರುತ್ತೇನೆ. ನನ್ನ ಅತ್ತೆಯ ತಂದೆ ಹೆಸರು ನಾಗಪ್ಪ ಇರುತ್ತದೆ. ನಾಗಪ್ಪ ಮರಣ ಹೊಂದಿ ಸುಮಾರು 45-50 ವರ್ಷ ಆಗಿರುತ್ತದೆ. ನಾಗಪ್ಪನ ಹೆಂಡತಿ ಯಲ್ಲವ್ವ ಮರಣ ಹೊಂದಿ ಸುಮಾರು 30 ವರ್ಷ ಆಗಿರುತ್ತದೆ. ನಾಗಪ್ಪ ಮತ್ತು ಯಲ್ಲವ್ವಳಿಗೆ ಗಂಗವ್ವ, ದುರ್ಗವ್ವ, ಫಕೀರವ್ವ, ಉದ್ದವ್ವ, ಹೊನ್ನವ್ವ , ಕರೆವ್ವ ಎಂಬ 6 ಜನ ಹೆಣ್ಣು ಮಕ್ಕಳು ಮತ್ತು ಶಿವಪ್ಪ ಎಂಬ ಒಬ್ಬ ಗಂಡು ಮಗನಿರುತ್ತಾನೆ. ಶಿವಪ್ಪ ಮರಣ ಹೊಂದಿ ಸುಮಾರು 15 ವರ್ಷಗಳಾಗಿರುತ್ತವೆ. ಶಿವಪ್ಪನಿಗೆ ಮೊದಲನೇ ಹೆಂಡತಿ ಮಹಾದೇವಿ ಮತ್ತು 2 ನೇ ಹೆಂಡತಿ ಲಕ್ಕವ್ವ ಇರುತ್ತಾರೆ. ಮೊದಲ ಹೆಂಡತಿಗೆ ನಾಗಪ್ಪ ಮತ್ತು ರೇಣುಕಾ ಎಂಬ ಇಬ್ಬರು ಮಕ್ಕಳು ಇರುತ್ತಾರೆ. 2 ನೇ ಹೆಂಡತಿಗೆ ಶ್ರೀದೇವಿ ಎಂಬ ಮಗಳು ಇರುತ್ತಾಳೆ. ಕರೆವ್ವ ಮರಣ ಹೊಂದಿರುತ್ತಾರೆ. ಕರೆವ್ವಳಿಗೆ ವಿಠಲ್ ಎಂಬ ಮಗ ಮತ್ತು ರುಕ್ಮಾ ಎಂಬ ಮಗಳು ಇರುತ್ತಾಳೆ. ನನ್ನ ಅತ್ತೆ ಜೀವಂತ ಇದ್ದಾಗ ತನ್ನ ತಂದೆಯ ಆಸ್ತಿಯಲ್ಲಿ ಪಾಲು ಬೇಕುಂತ ದಾವಾ ಹಾಕಿಲ್ಲ. ನನ್ನ ಗಂಡ ಜೀವಂತ ಇದ್ದಾಗ ತನ್ನ ತಾಯಿಯ ಆಸ್ತಿಯಲ್ಲಿ ಪಾಲು ಬೇಕು ಅಂತ ದಾವೆ ಮಾಡಿರುವುದಿಲ್ಲ. ಈ ದಾವೆಯನ್ನು 1 ಜಮೀನು ಮತ್ತು 2 ಮನೆಗಳ ಮೇಲೆ ಹಾಕಿರುತ್ತೇನೆ. ದಾವಾ ಜಮೀನಿನ ಸರ್ವೆ ನಂ. ಮತ್ತು ಮನೆಗಳ ನಂಬರ್ ಹೇಳಲಾಗುವುದಿಲ್ಲ. ದಾವಾ ಜಮೀನು ರಾಜಶ್ರೀ ಮತ್ತು ನಾಗಪ್ಪನ ಹೆಸರಿನಲ್ಲಿರುತ್ತದೆ. ರಾಜಶ್ರೀ ಮತ್ತು ನಾಗಪ್ಪ ಶಿವಪ್ಪನ ಮಕ್ಕಳು ಅಂದರೆ ಸರಿ. ದಾವಾ ಮನೆಗಳು ಯಾರ ಹೆಸರಿನಲ್ಲಿರುತ್ತವೆ ಅಂದರೆ ಸಾಕ್ಷಿಯು ರಾಜಶ್ರೀ ಮತ್ತು ನಾಗಪ್ಪನ ಹೆಸರಿನಲ್ಲಿರುತ್ತವೆ ಎನ್ನುತ್ತಾರೆ. ದಾವಾ ಮನೆಗಳು ರಾಜಶ್ರೀ ಮತ್ತು ನಾಗಪ್ಪನ ಹೆಸರಿನಲ್ಲಿರುತ್ತವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ  ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ